ಗಮನಿಸಬಹುದು. ಮನುಷ್ಯನ ಜೀವನೋಪಾಯ ವಿಧಾನಗಳು, ಕ್ರಿಸ್ತಪೂರ್ವ ಜೀವನ ಶೈಲಿಯನ್ನು ನಾವು ಅಲ್ಲಿ ಗಮನಿಸಬಹುದು. ಹೀಗೆ ಸಾಹಿತ್ಯ ಕ್ಷೇತ್ರದತ್ತ ಮತ್ತಷ್ಟು ಒಲವು ಮೂಡಿತು. ಓದುತ್ತ ನನ್ನಲ್ಲಿ ಹುಟ್ಟಿದ ಮತ್ತೊಂದು ಪ್ರಶ್ನೆಯೆಂದರೆ – ಅಯ್ಯಪ್ಪ ಜನನ, ಈಶ್ವರನ ಅರ್ಧ ನಾರೀಶ್ವರ ಪರಿಕಲ್ಪನೆ, ಮೋಹಿನಿಯ ಅವತಾರ ಮುಂತಾದ ಕಥೆಗಳನ್ನು ಎಷ್ಟೊಂದು ದೈವೀ ಭಾವದಿಂದ ಜನರು ಮನ್ನಿಸುತ್ತಾರೆ, ಆರಾಧನಾ ಭಾವದಿಂದ ನೋಡುತ್ತಾರೆ. ಆದರೆ ನಿಜಕ್ಕೂ ಅಯ್ಯಪ್ಪ, ಅರ್ಧನಾರೀಶ್ವರರಂತಹವರು ಹುಟ್ಟಿದರೆ ಅವರನ್ನು ಅಕ್ಷರಶಃ ಬೀದಿಗೆ ಬಿಸಾಕಲಾಗುತ್ತದೆ. ಈ ವಿರೋಧಾಭಾಸದ ಮನೋಧರ್ಮಕ್ಕೆ ಕಾರಣಗಳೇನು ಎಂದು ನನಗೆ ಇಂದಿಗೂ ಗೊತ್ತಾಗಿಲ್ಲ. ನಾನು ಹುಡುಕಾಡುತ್ತಲೇ ಇದ್ದೇನೆ.

**◆ ನಿಮ್ಮನ್ನು ತಂಜಾವೂರು ಶೈಲಿಯ ನಾಯಕಿ ಭಾವ ಪರಂಪರೆಯ ನೃತ್ಯಪಟು ಎಂದು ಗುರುತಿಸುತ್ತಾರೆ. ಇಲ್ಲಿ 'ನಾಯಕಿ ಭಾವ' ಪರಂಪರೆ ಎಂದರೇನು?**

ಭಾರತೀಯ ಸಂಸ್ಕೃತಿಯಲ್ಲಿ ಕಲಾವಿದರಾದವರು ಅಂತರಂಗದಲ್ಲಿರುವ ದೈವೀಶಕ್ತಿಯನ್ನು ಸಾಕ್ಷಾತ್ಕರಿಸಿಕೊಳ್ಳಲು ಇರುವ ಮಾಧ್ಯಮ ನೃತ್ಯಕಲೆ. ಜೀವಾತ್ಮನು ಪರಮಾತ್ಮನನ್ನು ಕಾಣಲು ನಡೆಸುವ ಹುಡುಕಾಟವೇ ಭಾರತೀಯ ಕಲಾಪ್ರಕಾರದ ಕೇಂದ್ರದಲ್ಲಿರುವ ಆಶಯ. ಅಂದರೆ ಏಕರೂಪಿ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವುದಕ್ಕೆ ಮಾಡುವ ಪ್ರಯತ್ನ. ಶೈವಪರಂಪರೆಯಲ್ಲಿ ಈ ಪರಮಾತ್ಮನನ್ನು ಅರ್ಧನಾರೀಶ್ವರ ಎಂಬ ರೂಪದಲ್ಲಿ ಆರಾಧಿಸಿದರೆ ವೈಷ್ಣವ ಪರಂಪರೆಯಲ್ಲಿ ವಿಷ್ಣು ಎಂದು ಆರಾಧಿಸುತ್ತಾರೆ. ಭಾರತೀಯ ಕಲಾಪ್ರಕಾರಗಳಲ್ಲಿ ಈ ಕೇಂದ್ರಬಿಂದುವನ್ನು ನಾಯಕನೆಂದೂ, ಅದನ್ನು ಆರಾಧಿಸುತ್ತ ಸಾಕ್ಷಾತ್ಕರಿಸಿಕೊಳ್ಳಲು ಪ್ರಯತ್ನಿಸುವ ಕಲಾವಿದರನ್ನು ನಾಯಕಿಯೆಂದೂ ಪರಿಗಣಿಸಲಾಗುತ್ತದೆ. ಹಾಗಾಗಿ ಈ ಆರಾಧನೆಯನ್ನು ಭಕ್ತಿ ಭಾವದಿಂದ ಶೃಂಗಾರ ಭಾವದಿಂದ ಮಾಡುವುದಕ್ಕೆ ಕಲಾಪ್ರಕಾರಗಳು ಆಸರೆಯಾಗುತ್ತವೆ. ಈ ಭಾವವನ್ನೇ ನಾಯಕೀಭಾವ ಎಂದು ಗುರುತಿಸುತ್ತೇವೆ. ಗುರು ಕಿಟ್ಟಪ್ಪ ಪಿಳ್ಳೈ ಅವರು ಆಸ್ಥೆಯಿಂದ ತಿಳಿಸಿಕೊಟ್ಟ ಹಲವು ಅಪರೂಪದ ಕೃತಿಗಳ ಮೂಲಕ ಈ ವಿಚಾರಗಳನ್ನು ನಾನು ಅರಿತುಕೊಂಡು ಪ್ರಸ್ತುತಪಡಿಸುತ್ತಿದ್ದೇನೆ.

**◆ ಶಿಷ್ಯ ಪರಂಪರೆಯನ್ನು ಮುಂದುವರೆಸುತ್ತಿದ್ದೀರಾ?**

ನಾನು ಸದ್ಯಕ್ಕೆ ಪ್ರದರ್ಶನಗಳತ್ತಲೇ ಹೆಚ್ಚು ಗಮನ ಹರಿಸುತ್ತಿದ್ದೇನೆ. ಭರತನಾಟ್ಯ ತರಗತಿಗಳನ್ನು ಕೂಡ ನಿರ್ವಹಿಸುತ್ತೇನೆ. ಮಧುರೈ ಮತ್ತು ಚೆನ್ನೈಯಲ್ಲಿ 'ನರ್ತಕಿ ನೃತ್ಯ ಕಲಾಲಯ'ವನ್ನು ಸ್ಥಾಪಿಸಿದ್ದೇನೆ. ಆದರೆ ಶಿಷ್ಯಂದಿರ ಕಣ್ಣಲ್ಲಿ ಶಕ್ತಿ–ನರ್ತಕಿ ಅವರ ಕಣ್ಣಲ್ಲಿದ್ದ ನೃತ್ಯಾಸಕ್ತಿಯನ್ನೇ ನಾನು ಹುಡುಕುತ್ತೇನೆ. ಈವರೆಗೆ ಆ ರೀತಿಯ ತುಡಿತ ಇರುವ ಕಂಗಳನ್ನು ನಾನು ನೋಡಿಲ್ಲ. ಅಂತಹವರು ಬರಬಹುದು, ನೋಡೋಣ. ನೃತ್ಯವೆಂದರೆ ನಾನು ಕನಸಿನ ಲೋಕದಲ್ಲಿಯೇ ವಿಹರಿಸುತ್ತಿರುತ್ತೇನೆ. ಈಗಲೂ ಮೂರು ತಾಸುಗಳ ಕಾಲ ಬಿಡುವಿಲ್ಲದೆ ನೃತ್ಯವನ್ನು ಪ್ರದರ್ಶಿಸುವುದೆಂದರೆ ನನಗೆ ಬಹಳ ಇಷ್ಟ. ನೃತ್ಯವೆಂದರೆ ಅಲ್ಲಿ ಮನಸ್ಸು ಮತ್ತು ದೇಹಕ್ಕೆ ದಣಿವೇ ಇಲ್ಲ. ಹದಿನಾರರ ಹುಡುಗಿಯಂತೆ ನನ್ನನ್ನೇ ಕಲ್ಪಿಸಿಕೊಂಡು ನಾನು ನರ್ತಿಸುತ್ತಿರುತ್ತೇನೆ.

ನಾನು ಇಂದು ಏನಾಗಿದ್ದೇನೋ ಅದಕ್ಕೆ ಕಾರಣ ನೃತ್ಯವೊಂದೇ. ನೃತ್ಯವೇ ನನ್ನನ್ನು ಆಯ್ಕೆ ಮಾಡಿಕೊಂಡಿದೆ. ಬಹಳ ಆಸಕ್ತಿದಾಯಕ ಬದುಕನ್ನು ನಾನು ಜೀವಿಸುತ್ತಿದ್ದೇನೆ. ನನ್ನ ಈ ದೇಹವು ಬಹಳ ಗೊಂದಲಗಳನ್ನು ಹೊಂದಿದೆ. ದೇವರು ಸಹಜವಾಗಿ ಇತರರನ್ನು ಸೃಷ್ಟಿಸಿದಂತೆ ನನ್ನನ್ನು ಸೃಷ್ಟಿಸಿಲ್ಲ. ನನ್ನ ದೇಹದ ಹೊರನೋಟವು ವ್ಯಕ್ತಪಡಿಸುವ ವಿಚಾರವನ್ನು ನನ್ನ ಆತ್ಮವು ಒಪ್ಪಿಕೊಳ್ಳುವುದಿಲ್ಲ. 'ಈ ದೇಹವು ನಿನ್ನದಲ್ಲ. ಇದೇನಿದ್ದರೂ ನಾಶವಾಗುವಂತಹುದು. ಆದರೆ ನಿಜವಾಗಿಯೂ ನೀನೊಬ್ಬಳು ಹುಡುಗಿ' ಎಂದು ಆತ್ಮ ಎಚ್ಚರಿಸುತ್ತಿರುತ್ತದೆ. 'ನೀನೊಬ್ಬಳು ಸುಂದರ ಹುಡುಗಿ ಮತ್ತು ನೃತ್ಯಪಟುವಾಗಿದ್ದೀಯೆ' ಎಂದು ಹೇಳುತ್ತಿರುತ್ತದೆ. ನಾನು ಬಾಲ್ಯದಲ್ಲಿ ಕಂಡ ಕನಸನ್ನು ದೇವರು ನನಸು ಮಾಡಿದರು. ಜಗತ್ತಿನಲ್ಲಿ ಎಷ್ಟೋ ಜನರು ಬಾಲ್ಯದಲ್ಲಿ ಕಂಡ ಕನಸು ನನಸಾಗಿರುವುದಿಲ್ಲ. ಆದರೆ ನನ್ನ ಕನಸುಗಳು ನನಸಾಗಿವೆ. ಜೊತೆಗೆ ಅದೇ ನನಸು ನನ್ನ ಆತ್ಮದ ಹೇಳಿಕೆಯನ್ನು ಸಮರ್ಥಿಸುತ್ತಿದೆ. ಅಂದಮೇಲೆ ನಾನು ಭಾಗ್ಯಶಾಲಿ ಅಲ್ಲವೇ.

●